# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಕ್ಷಿಣ ವಲಯ, ವಿಜಯನಗರ ಉಪವಿಭಾಗ

### ವಾರ್ಡ್ ನಂ.122 : ಕೆ.ಪಿ ಅಗ್ರಹಾರ

**ದಿನಾಂಕ: 04.10.2021 ರಂದು 11.00 ಗಂಟೆಗೆ ಶ್ರೀ. ರವಿವರ್ಮ.ಬಿ ನೋಡಲ್ ಅಧಿಕಾರಿ, ವಾರ್ಡ್ 122 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿಜಯನಗರ ಉಪವಿಭಾಗ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ. ರವಿವರ್ಮ ಬಿ | ನೋಡಲ್ ಅಧಿಕಾರಿ–ವಾರ್ಡ್ ನಂ.122 |
| 2 | ಶ್ರೀ ಹೇಮಂತ್ ಕುಮಾರ್ ಎಸ್ ಕೆ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಹಾಗೂ ಸಂಚಾಲಕರು–ವಾರ್ಡ್ 122 |
| 3 | ಶ್ರೀ. ಮುನಿಯಣ್ಣ | ಹಿ.ಆ.ಪ |
| 4 | ಶ್ರೀ. ಡಿ ರಾಮ್ ಕುಮಾರ್ | ಕಿ.ಆ.ಪ |
| 5 | ಶ್ರೀಮತಿ. ಗುಣ.ಎಸ್ | LW (SWM) |
| 6 | ಶ್ರೀಮತಿ. ಮಹದೇವಮ್ಮ | LW (SWM) |

**:ನಡಾವಳಿಯ ವರದಿ:**

➢ ಕಾರ್ಯದರ್ಶಿಗಳಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ಮಾತನಾಡುತ್ತಾ ಸಭೆಗೆ ಹಾಜರಾದ ನೋಡಲ್ ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತ ಕೋರಿದರು.

- **ರಸ್ತೆಗುಂಡಿ ನಿರ್ವಹಣೆ ಬಗ್ಗೆ:**

  - ಹೇಮಂತ್ ಕುಮಾರ್ ಎಸ್.ಕೆ ಸಹಾಯಕ ಅಭಿಯಂತರರು, ವಾರ್ಡ್ ನಂ.122 ರವರು ಮಾತನಾಡಿ, ವಾರ್ಡ್ ನಲ್ಲಿ ಇರುವ ರಸ್ತೆಗುಂಡಿಗಳನ್ನು ಮುಚ್ಚಲು Hot Mix Plant ನಿಂದ 2 ಲೋಡ್ ವೆಟ್ ಮೀಕ್ಸ್ ಮತ್ತು 2 ಲೋಡ್ ಡಾಂಬರ್‌ನ್ನು ಮೀಕ್ಸ್‌ಗಳು ಬಂದಿದ್ದು ಮೂರು ರಸ್ತೆಯ ರಸ್ತೆಗುಂಡಿಗಳನ್ನು ಮುಚ್ಚಲಾಗಿರುತ್ತದೆ.

- **ಸ್ವಚ್ಛತೆ ಮತ್ತು ಘನ ತ್ಯಾಜ್ಯ ನಿರ್ವಹಣೆ ಬಗ್ಗೆ:**

  - ನೋಡಲ್ ಅಧಿಕಾರಿರವರು ವಾರ್ಡ್ 122ರ ವ್ಯಾಪ್ತಿಯಲ್ಲಿರುವ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ವಿಚಾರಿಸಲಾಗೀ, ಇದಕ್ಕೆ ಶ್ರೀ.ಡಿ.ರಾಮ್.ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.122 ಮಾತನಾಡಿ, ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿನಿತ್ಯವು ಬ್ಲಾಕ್‌ಸ್ಪಾಟ್‌ಗಳನ್ನು ತೆರವುಗೊಳಿಸುಲಾಗುತ್ತಿದೆ ಎಂಬ ಮಾಹಿತಿಯನ್ನು ಸಭೆಗೆ ತಿಳಿಸಿದರು.

- **ಕೋವಿಡ್–19, ಸಾಂಕ್ರಾಮಿಕ ರೋಗದ ಬಗ್ಗೆ**

  - ಶ್ರೀ. ಮುನಿಯಣ್ಣ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.122 ರವರು ಮಾತಾನಾಡಿ ವಾರ್ಡ್ 122 ರ ವ್ಯಾಪ್ತಿಯಲ್ಲಿ ಪ್ರತಿ ದಿನ ಟೆಸ್ಟ್ ನಡೆಸಲಾಗಿದ್ದು, ಇವುಗಳಲ್ಲಿ ಬೆರಳಣಿಕೆ ಸಂಖ್ಯೆಯಲ್ಲಿ ಸೋಂಕಿತರು ಕಂಡುಬರುತ್ತಿದ್ದು, ಸಾರ್ವಜನಿಕರಲ್ಲಿ ಹಾಗೂ ಬೀದಿ ವ್ಯಾಪಾರಿಗಳಲ್ಲಿ ಸ್ವಚ್ಛತೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಬಗ್ಗೆ ಅರಿವು ಮೂಡಿಸಲಾಗಿದೆ ಎಂದು ತಿಳಿಸಿದರು.

➢ ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡಿನ ಕುಂದುಕೊರತೆಗಳತ್ತ ಗಮನಹರಿಸಿ ವಾರ್ಡ್ ಅಭಿವೃದ್ಧಿ ಪಡಿಸಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಹೇಮಂತ್ ಕುಮಾರ್ ಎಸ್ ಕೆ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

S(ooe) 4/10/2021 — B. R. 04/10/21

**ಸದಸ್ಯ ಕಾರ್ಯದರ್ಶಿ–ವಾರ್ಡ್ 122 ಹಾಗೂ**
**ಸಹಾಯಕ ಅಭಿಯಂತರರು,**

**(ರವಿವರ್ಮ.ಬಿ)**
**ನೋಡಲ್ ಅಧಿಕಾರಿ ವಾರ್ಡ್–122**

ಪ್ರತಿಯನ್ನು:

1) ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
2) ಕಾರ್ಯಪಾಲಕ ಅಭಿಯಂತರರು (ವಿಜಯನಗರ ವಿಭಾಗ) ರವರ ಮಾಹಿತಿಗಾಗಿ ಕಳುಹಿಸಿದೆ.
3) ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
4) ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ) ರವರ ಮಾಹಿತಿಗಾಗಿ ಕಳುಹಿಸಿದೆ.
5) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.122 ರವರ ಮಾಹಿತಿಗಾಗಿ
6) ಸಹಾಯಕ ಅಭಿಯಂತರರು (ವಿದ್ಯುತ್ ಬೆಸ್ಕಾಂ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7) ಸಹಾಯಕ ಅಭಿಯಂತರರು ವಿದ್ಯುತ್ (ಬೀದಿದೀಪ) ಬಿಬಿಎಂಪಿ ರವರ ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ
8) ಕಛೇರಿ ಕಡತಕ್ಕೆ